ಈ ದಿನ ದಿನಾಂಕಃ 13-02-2023 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು **1** ರಿಂದ **4** ಪ್ರತಿವಾದಿಗಳ ಪರ ವಕೀಲರಿಂದಃ

9. ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ.15/3 ರ ಆಸ್ತಿ ಇರುತ್ತದೆ, ಪಶ್ಚಿಮಕ್ಕೆ ಪಿಡಬ್ಲ್ಯೂಡಿ ರಸ್ತೆ, ಉತ್ತರಕ್ಕೆ ಶಂಕರಪ್ಪನವರ ಆಸ್ತಿ ಮತ್ತು ದಕ್ಷಿಣಕ್ಕೆ ಪಂಚಾಯಿತಿ ರಸ್ತೆ ಇರುತ್ತದೆ. ಪೂರ್ವದ ಸರ್ವೆ ನಂ.15/3 ರ ಆಸ್ತಿಯ ಕುರಿತು ಇದೇ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿದೆ ಎಂದರೆ ಸರಿ. ದಾವಾ ಸ್ವತ್ತಿನ ಯಾವುದೆ ಬಾಗ ನಮ್ಮ ಸ್ವಾಧೀನದಲ್ಲಿಲ್ಲ ಎಂದರೆ ಸರಿ. ಪ್ರತಿವಾದಿಗಳಿಂದ ಒಟ್ಟು 38 ಗುಂಟೆ ಸ್ವಾಧೀನ ಕೋರಿ ದಾವೆ ಸಲ್ಲಿಸಿರುತ್ತೇವೆ. ದಾವಾ ಸ್ವತ್ತಿನ ಪೈಕಿ ಪ್ರತಿವಾದಿಗಳ ಸ್ವಾಧೀನದಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿಗಳು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಕಾರ 5 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ದಾವಾ ಸ್ವತ್ತಿನ ಯಾವುದೆ ಭಾಗ ಇರುವುದಿಲ್ಲ.

10. ದಾವಾ ಸ್ವತ್ತು ಗ್ರಾಮ ಠಾಣೆಗೆ ಸೇರಿರುತ್ತದೆಎಂದು 5 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಲಾಗಿರುತ್ತದೆ. 5 ನೇ ಪ್ರತಿವಾದಿಗೆ ನೋಟಿಸ್ ನ್ನು ನೀಡಿದ್ದು ಅದಕ್ಕೆ ಪ್ರತ್ಯುತ್ತರವಾಗಿ ದಾವಾ ಸ್ವತ್ತು 1947 ರಲ್ಲಿಯೇ ಗ್ರಾಮ ಠಾಣೆಗೆ ಸೇರಿರುತ್ತದೆ ಎಂದು ತಿಳಿಸಿರುತ್ತಾರೆ. ದಾವಾ ಸ್ವತ್ತು ಹಾಗೂ ಸರ್ವೆ ನಂ.15/3 ರ ಆಸ್ತಿಗಳನ್ನು ಕಗತೂರು ಗ್ರಾಮದ ಸಾರ್ವಜನಿಕ ಉಪಯೋಗಕ್ಕಾಗಿ 1947 ರಲ್ಲಿಯೇ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದಲೇ ದಾವಾ ಸ್ವತ್ತನ್ನು ಸರ್ವೆ ದಾಖಲೆಗಳಲ್ಲಿ ಖರಾಬು ಎಂದು ಉಲ್ಲೇಖಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

11. ದಾವಾ ಸ್ವತ್ತಿನ ಸರ್ವೆ ದಾಖಲೆಗಳನ್ನು ನಾನು ಪಡೆದಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸರ್ವೆ ದಾಖಲೆಯನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಸರ್ವೆ ಇಲಾಖೆಯ ಪಕ್ಕಾ ಬುಕ್ ನ ನಕಲನ್ನು ತೋರಿಸಿ ಕೇಳಲಾಗಿ ಅದು ದಾವಾ ಆಸ್ತಿ ಮತ್ತು ಇತರ ಆಸ್ತಿಗೆ ಸಂಬಂದಪಟ್ಟಿದ್ದು ಎಂದು ಒಪ್ಪಿಕೊಂಡಿದ್ದರಿಂದ ಅದನ್ನು <u>ನಿಡಿ **2**</u> ಎಂದು ನಿಶಾನೆಗೊಳಪಡಿಸಲಾಯಿತು. ಸರ್ವೆ ನಂ.15/3 ರ ಮತ್ತು 2 ರ ಹಿಸ್ಸಾ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಸದರಿ ಹಿಸ್ಸಾ ದಾಖಲೆಗಳ ದಾಖಲೆಯ ನಕಲನ್ನು ತೋರಿಸಿ ಕೇಳಲಾಗಿ ಸಾಕ್ಷಿ ಒಪ್ಪಿದ್ದರಿಂದ <u>ನಿಡಿ **3**</u> ಎಂದು ಗುರುತಿಸಲಾಯಿತು.

12. ದಾವಾ ಸ್ವತ್ತಿನಲ್ಲಿ ಕಗತೂರು ಗ್ರಾಮಸ್ಥರು 1947 ರಿಂದಲೂ ಸ್ವಾಧೀನ ಹೊಂದಿದ್ದಾರೆ ಎಂದರೆ ಸಾಕಿಯು 7-8 ವರ್ಷಗಳಿಂದ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. 7-8 ವರ್ಷಗಳ ಹಿಂದೆ ಗ್ರಾಮಸ್ಥರು ಸ್ವಾಧೀನಕ್ಕೆ ಬಂದ ಮೇಲೆ ನಾನು ಸದರಿ ಯವರ ಮೇಲೆ ದೂರನ್ನಾಗಲೀ ದಾವೆಯನ್ನಾಗಲೀ ದಾಖಲಿಸಿಲ್ಲ. 1 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಪಂಚಾಯಿತಿಯಲ್ಲಿ ಖಾತೆ ದಾಖಲೆಗಳು ಇರುತ್ತದೆ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ. ದೇವಸ್ಥಾನ 20x30 ಅಡಿಗಳಲ್ಲಿ ಇರುತ್ತದೆ. ಗ್ರಾಮಸ್ಥರು ದೇವಸ್ಥಾನ ಮತ್ತು ಸಮುದಾಯ ಭವನವನ್ನು ನಿರ್ಮಿಸುವ ಕಾಲಕ್ಕೆ ನಾವು ಊರಿಗೆ ಒಳ್ಳೆಯದಾಗಲೀ ಎಂದು ತಕರಾರು ಮಾಡಿರುವುದಿಲ್ಲ.

13. ದಾವಾ ಸ್ವತ್ತು ಗ್ರಾಮದ ಮಧ್ಯದ ಆಸ್ತಿಯಾಗಿದ್ದು ಅದರಲ್ಲಿ ಪಂಚಾಯಿತಿಯವರು ವಿದ್ಯುತ್ ಮತ್ತು ನೀರಿನ ಸರಬರಾಜನ್ನು ಹಾಗೂ ರಸ್ತೆಯನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ರಸ್ತೆಯಾಗಿ 2 ವರ್ಷಗಳಾಗಿರುತ್ತವೆ. ದಾವಾ ಸ್ವತ್ತನ್ನು 1947 ರಲ್ಲಿ ಸರ್ಕಾರದವರು ಸ್ವಾಧೀನಕ್ಕೆ ಪಡೆದ ನಂತರದಿಂದ ಅದು ಗ್ರಾಮ ಠಾಣಾದಲ್ಲಿರುತ್ತದೆ ಎಂದರೆ ಸರಿಯಲ್ಲ. ತದ ನಂತರದಲ್ಲಿ ದಾವಾ ಸ್ವತ್ತಿನ ಸರ್ವೆ ದಾಖಲೆಗಳು 5 ನೇ ಪ್ರತಿವಾದಿಯ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯವರ ಕೈತಪ್ಪಿನಿಂದಾಗಿ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ನಮ್ಮ ಕುಟುಂಬದವರ ಹೆಸರಿಗೆ ಚಾಲ್ತಿಯಲ್ಲಿರುತ್ತವೆ ಎಂದರೆ ಸರಿಯಲ್ಲ.

14. 1947 ರಲ್ಲಿ ದಾವಾ ಸ್ವತ್ತಿನ ಖಾತೆ ನನ್ನ ಅಜ್ಜನಾದ ಹನುಮಂತಪ್ಪ ಬಿನ್ ಕರಿಯಪ್ಪನವರ ಹೆಸರಿನಲ್ಲಿತ್ತು. ಸಣ್ಣಪ್ಪ ಹನುಮಂತಪ್ಪನವರ ಮಗ. ಸಣ್ಣಪ್ಪನವರ ಮಗ ನಾನು. ದಾವಾ ಸ್ವತ್ತಿನಲ್ಲಿ ನಾವು ಪ್ರತ್ಯಕ್ಷವಾಗಿ ಅನುಬೋಗದಲ್ಲಿ ಇರದೆ ಇದ್ದರು ಸಹ ಕಂದಾಯ ದಾಖಲೆಗಳಲ್ಲಿ ನಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ 1947 ರಿಂದ ನಮಗೆ ಯಾವುದೆ ಹಕ್ಕು ಮತ್ತು ಹಿತಾಸಕ್ತಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ.

15. ದಾವಾ ಸ್ವತ್ತಿನಲ್ಲಿರುವ ಕಟ್ಟಡ ಮತ್ತು ಕಣಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ 4 ಬಾವಚಿತ್ರದಲ್ಲಿರುವ ಕಟ್ಟಡ, ಕಣ ಮತ್ತು ದೇವಸ್ಥಾನಗಳು ದಾವಾ ಸ್ವತ್ತಿನಲ್ಲಿ ಮತ್ತು ಪ್ರತಿವಾದಿಯ ಸ್ವಾಧೀನದಲ್ಲಿರುತ್ತವೆ ಎಂದರೆ ಸರಿ. ಸಾಕ್ಷಿಯ ಒಪ್ಪಿರುವ ಬಾಚಿತ್ರಗಳನ್ನು <u>ನಿಡಿ **4** ರಿಂದ **7**</u>

ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರದೆ ಇದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5 ನೇ ಪ್ರತಿವಾದಿ ಏಕ ತರ್ಫಿಯಾದುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು**)**

ಓ**.**ಹೇ**.**ಕೇ**.** ಸರಿ ಇದೆ**.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.